(13)

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಛಲವಾದಿ.ಟಿ. ನಾರಾಯಣಸ್ವಾಮಿ ರವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:** **ಕಲಬುರಗಿ ಜಿಲ್ಲೆಯಲ್ಲಿ ಮರಳು ಹಪ್ತಾ, ವೈನ್ ಶಾಪ್ ಹಪ್ತಾ ಹಾಗೂ ಇನ್ನಿತರ ಹಣ ವಸೂಲಿ ಮಾಡಲು ಪಿಎಸ್‌ಐ, ಸಿಪಿಐ, ಡಿವೈಎಸ್‌ಪಿ ಅವರು ಹಪ್ತಾ ವಸೂಲಿಗಾಗಿ ಒತ್ತಡವನ್ನು ಪೊಲೀಸ್ ಪೇದೆಗಳಿಗೆ ಹಾಕುತ್ತಿರುವುದು ಹಾಗೂ ಸದರಿ ಹಪ್ತಾ ವಸೂಲಿಗಳನ್ನು ಮಾಡದ ಪೊಲೀಸ್ ಪೇದೆಗಳನ್ನು ಹಿರಿಯ ಅಧಿಕಾರಿಗಳು ವರ್ಗಾವಣೆ ಮಾಡುತ್ತಿರುವ ಪ್ರಕರಣಗಳು ವರದಿಯಾಗಿದೆ. ಪೊಲೀಸ್ ಅಧಿಕಾರಿಗಳ ಒತ್ತಡ ಹಾಗೂ ವರ್ಗಾವಣೆಗೆ ಮನನೊಂದು ಕಲಬುರಗಿ ಸಂಚಾರಿ ಠಾಣೆ ಸಿಪಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಈ ವಿಷಯದ ಮೇಲೆ ಹಲವು ಪೇದೆಗಳು ಹಿರಿಯ ಅಧಿಕಾರಿಗಳ ವಿರುದ್ಧ ಆಕ್ರೋಶವನ್ನು ಹೊರ ಹಾಕಿದ್ದಾರೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವ ಕುರಿತು**

**ಉತ್ತರ:** ಕಲಬುರಗಿ ಜಿಲ್ಲೆ / ಕಲಬುರಗಿ ನಗರದ ವ್ಯಾಪ್ತಿಯಲ್ಲಿ ಮರಳು ಹಪ್ತಾ, ವೈನ್ ಶಾಪ್ ಹಪ್ತಾ ಹಾಗೂ ಇನ್ನಿತರ ಹಣ ವಸೂಲಿ ಮಾಡುತ್ತಿರುವ ಕುರಿತು ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ ಹಾಗೂ ಪಿಎಸ್‌ಐ, ಸಿಪಿಐ, ಡಿವೈಎಸ್‌ಪಿ ರವರು ತಮ್ಮ ಅಧೀನದ ಯಾವುದೇ ಪೊಲೀಸ್ ಪೇದೆಯವರ ಮೇಲೆ ಒತ್ತಡ ಹಾಕುತ್ತಿರುವುದು ಕಂಡು ಬಂದಿರುವುದಿಲ್ಲ ಹಾಗೂ ಈ ರೀತಿಯ ಯಾವ ಪ್ರಕರಣಗಳು ದಾಖಲಾಗಿರುವುದಿಲ್ಲ. ಆ ರೀತಿ ಹಿರಿಯ ಅಧಿಕಾರಿಗಳೇನಾದರು ತೊಂದರೆ ಕೊಟ್ಟಿದ್ದು ಕಂಡು ಬಂದರೆ, ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಕಲಬುರಗಿ ನಗರದಲ್ಲಿ ದಿನಾಂಕ 06.07.2023 ರಂದು ಭೀಮಾನಾಯ್ಕ, ಸಿಪಿಸಿ–103, ಸಬ್‌ಅರ್ಬನ್ ಪೊಲೀಸ್ ಠಾಣೆ ರವರು ಮಾಧ್ಯಮಗಳ ಮುಂದೆ ಪೊಲೀಸ್ ಇಲಾಖೆಯ ಬಗ್ಗೆ ಮರಳು ಹಪ್ತಾ ವೈನ್ ಶಾಪ್ ಹಪ್ತಾ ಹಾಗೂ ಇನ್ನಿತರ ಹಣ ವಸೂಲಿ ಇನ್ನಿತರ ಹೇಳಿಕೆ ನೀಡಿರುತ್ತಾರೆ. ಭೀಮಾನಾಯಕ ಸಿಪಿಸಿ–103 ರವರು ಹಪ್ತಾ ವಸೂಲಿಗಳನ್ನು ಮಾಡದ ಪೊಲೀಸ್ ಪೇದೆಗಳನ್ನು ವರ್ಗಾವಣೆ ಮಾಡುತ್ತಿರುವ ಹೇಳಿಕೆ ಸುಳ್ಳಾಗಿರುತ್ತದೆ. ಸರ್ಕಾರದ ಸಾರ್ವತ್ರಿಕ ವರ್ಗಾವಣೆಯ ಸುತ್ತೋಲೆ ಪ್ರಕಾರ ಮತ್ತು ಸಿಬ್ಬಂದಿಗಳ ಸ್ವತಃ ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಲಾಗಿರುತ್ತದೆ.

ಭೀಮಾನಾಯಕ ಸಿಪಿಸಿ–103 ರವರು ಈಗಾಗಲೇ ಈ ಮೊದಲು ಬ್ರಹ್ಮಪೂರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಶ್ರೀ ಅಬ್ದುಲ್ ಮಜೀದ್ ಮುಸ್ತಫಾ ರವರಿಂದ ರೂ.30,000=00 ಲಂಚ ಪಡೆಯುತ್ತಿರುವಾಗ ಭ್ರಷ್ಟಾಚಾರ ನಿಗ್ರಹ ದಳದವರ ಬಲೆಗೆ ಬಿದ್ದು ಪ್ರಕರಣ ಸಂಖ್ಯೆ 05/2022 ಕಲಂ ಭ್ರಷ್ಟಾಚಾರ ನಿಷೇದ ಕಾಯ್ದೆ 1988 ಕಲಂ 7ಎ ರಲ್ಲಿ ಪ್ರಕರಣ ದಾಖಲಾಗಿ ಸದರಿಯವರನ್ನು ನ್ಯಾಯಾಂಗ ಬಂಧನಕ್ಕೆ ದಿನಾಂಕ 09.06.2022 ರಂದು ಒಪ್ಪಿಸಲಾಯಿತು. ಈ ಪ್ರಕರಣವು ವಿಚಾರಣಾ ಸಂಖ್ಯೆ: ಡಿಇ/ಸಿ–6/02/2023 ಇಲಾಖಾ ವಿಚಾರಣೆ ಚಾಲ್ತಿಯಲ್ಲಿರುತ್ತದೆ ಮತ್ತು ಸದರಿ ಪ್ರಕರಣವು ಪ್ರತ್ಯೇಕವಾಗಿ ಲೋಕಾಯುಕ್ತ ಇಲಾಖೆಯಲ್ಲಿಯೂ ಸಹ ವಿಚಾರಣೆ ಚಾಲ್ತಿಯಲ್ಲಿರುತ್ತದೆ.

ಶ್ರೀ ಚಂದ್ರಕಾಂತ, ಸಿಪಿಸಿ–140, ಸಂಚಾರ ಪೊಲೀಸ್ ಠಾಣೆ ರವರು ಮನನೊಂದು ಆತ್ಮಹತ್ಯೆಗೆ ಪ್ರಯತ್ನಿಸಿರುವುದಿಲ್ಲ. ಸದರಿರವರ ಆರೋಗ್ಯದಲ್ಲಿ ಏರು ಪೇರು ಆಗಿರುವುದರಿಂದ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ಸದರಿಯವರು ಈ ಬಗ್ಗೆ ಸ್ವತಃ ಹೇಳಿಕೆ ನೀಡಿ ಸ್ಪಷ್ಟಪಡಿಸಿರುತ್ತಾರೆ.

ಸಂಖ್ಯೆ: ಒಇ 214 ಪಿಇಜಿ 2023

ಜಿ. ಪರಮೇಶ್ವರ
(ಡಾ: ಜಿ. ಪರಮೇಶ್ವರ)
ಗೃಹ ಸಚಿವರು